**Golden Resrach Thoughts**
**Vol -2 , ISSUE –XI, May - 2013**
**ISSN No-2031-5063**
Available online at www.aygrt.isrj.org

ORIGINAL ARTICLE

# ಚಂದ್ರಶೇಖರ ಕಂಬಾರರ, ಕಾವ್ಯಗಳಲ್ಲಿ ಬದುಕಿನ ಪ್ರೀತಿ, ನಗರೀಕರಣ, ಗ್ರಾಮೀಣ ಬದುಕಿನ ಗಾಢ ಚಿತ್ರಣ

**ಶಿವಗಂಗಾ U. ಬಿಲಗುಂದಿ**

ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**

ಕನ್ನಡಕ್ಕೆ ಎಂಟನೆಯ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಡಾ.ಚಂದ್ರಶೇಖರ ಕಂಬಾರರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಗೋಡಗೇರಿಯಲ್ಲಿ ೧೯೩೭ ಜನೆವರಿ ೨ರಂದು ಜನಿಸಿದರು. ತಂದೆ ಬಸವಣೆಪ್ಪ, ತಾಯಿ ಚೆನ್ನಮ್ಮ. ಇವರು ಕನ್ನಡದ ಶ್ರೇಷ್ಠ ಕವಿಗಳು, ನವೋದಯ, ನವ್ಯ ಸಂದರ್ಭದಲ್ಲಿ ಕಾವ್ಯ ರಚನೆಗೆ ತೊಡಗಿದ ಕಂಬಾರರು ಗದ್ಯ ಪದ್ಯಗಳೆರಡನ್ನು ಅಭಿವ್ಯಕ್ತಿಯ ಸಮರ್ಥ ಮಾಧ್ಯಮಗಳನ್ನಾಗಿ ದುಡಿಸಿಕೊಂಡಿದ್ದಾರೆ.

ಚಂದ್ರಶೇಖರ ಕಂಬಾರ ಅವರ 'ಹೊಸ ಬಾಳಿಗೆ ಹೊರಟ ಮಗಳಿಗೆ' ಎಂಬ ಕವನದಲ್ಲಿ ಮದುವೆಯಾದ ಮೇಲೆ ಗಂಡನ ಮನೆಗೆ ಮೊದಲು ನಡೆಯಲು ಹೊರಟ ಮಗಳಿಗೆ ಬುದ್ಧಿವಾದ ಹೇಳುವ ಕವನಗಳು, ಜನಪದ ಹಾಡುಗಳು ಸಾಕಷ್ಟಿವೆ.

"ಹೊಸ ಬಾಳಿಗೆ ಹೊರಟ ಮಗಳು
...............................................
...............................................
ದಾರಿ ಸಾಗಿಸೋ ಶಿವನೆ ಅಂದದ್ದಿದೆ."[೧]

ಬದುಕಿನ ನಿಜವಾದ ಪಯಣ ಆರಂಭವಾಗುವುದು ಬದುಕಿನ ಒಂದ ಹಂತ ದಾಟಿದ ಮೇಲೆ ಮದುವೆಯಾಗಿ ಹೆಣ್ಣು ಗಂಡನ ಮನೆ ಸೇರಿದಾಗ ಅವಳ ಬಾಳಿನ ಪಯಣ ಆರಂಭವಾಗುವುದುಂಟು. ಕಣ್ಣು ತುಂಬ ಕನಸುಗಳನ್ನು ತುಂಬಿಕೊಂಡು ಹೊಸಬಾಳಿಗೆ ಹೊರಟ ಮಗಳಿಗೆ ಶುಭವಾಗಲಿ ಮಳಗೆ ನಿಮ್ಮ ಕನಸಾಗಲಿ ನನಸು,ಇನ್ನು ಮುಂದೆ ನಿಮ್ಮ ಪ್ರಯಾಣ ಸುರುವಾಗಬೇಕು. ನಾನು ಗಳಿಸಿದ್ದು ಅಲ್ಲಿಗಲ್ಲಿಗೆ ಸಮಲೆಕ್ಕ, ಅಷ್ಟೋ ಇಷ್ಟೋ ದಾರಿ ಸಾಗದೆ ದಾರಿಯ ಬದಿಗೆ ಕುಳಿತ ಅನುಭವವೂ ಇದೆ. ಮಳೆಗಾಲದಲ್ಲಿ ಆಗೀಗ ಹ್ಯಾಗೋ ಆಗಿ ಜಾರಿ ಬಿದ್ದದ್ದು ಇದೆ. ಮುಂದೆ ಹೇಗೆ ಎಂದು ಚಿಂತೆ ಮಾಡಿದ್ದುಂಟು. ಮೇಲೆ ಸುರಿಯುವ ಮಳೆ ಕೆಳಗೆ ಜಾರುವ ನೆಲ ದಾರಿಯು ಸಾಗುವುದು ಹೇಗೆ ಎಂದು ಹಣೆಗೆ ಕೈ ಹಚ್ಚಿಕೊಂಡು ದಾರಿ ಸಾಗಿಸೋ ಶಿವನೆ ಎಂದು ಬೇಡಿಕೊಂಡದ್ದು ಉಂಟು.

"ಆಗ ಅವತರಿಸಿದಿರಿ ನಮ್ಮ ತೋಟದಲೇನೆ
...............................................
...............................................
ಸೋಲಿಂದ ಬಹಳಷ್ಟು ಕಲಿಯೋದಿದೆ"[೨]

ನೀವು ಹಟ್ಟಿ ನಮ್ಮ ಬಾಳಿಗೆ ನೆಮ್ಮದಿಯನ್ನು ತಂದಿರಿ. ಸ್ವಚ್ಛವಾದ ಪ್ರೀತಿಯ ಬೆಳದಿಂಗಳನ್ನು ಸುರಿದಿರಿ ಹುಣ್ಣಿಮೆಯ ಕಡಲಾಗಿ ನಆವು ಉಕ್ಕಿದೆವು. ನಮ್ಮ ಕಣ್ಮುಂದೆ ಬೆಳೆದು ಚೈತ್ರದ ಚಮತ್ಕಾರವಾಗಿದೆ. ಚಿಗುರು ಹೂವಾಗುವ ಪವಾಡ ಕಡಿಮೆಯದಲ್ಲಿ. ಅದು ಕೂಡ ತಿಳಿದಿದ್ದು ನನ್ನಿಂದ ಗುರಿ ತಲುಪಲುಹೋಗಿ ಇನ್ನೆಲ್ಲಿಗೋ ಮುಟ್ಟಿ ಏನೆನೋ ಆದದ್ದು ಎಲ್ಲವನ್ನು ಮಗಳಿಗೆ ನೆನಪು ಮಾಡಿಕೊಡುವನು. ಸೋಲಿನಿಂದಲೂ ಮನುಷ್ಯ ಕಲಿಯುವುದು ಬಹಳಷ್ಟಿದೆ ಎಂಬುದನ್ನು ತಿಳಿ ಹೇಳುತ್ತಾನೆ.

"ನಾವು ಬಿತ್ತಿದ್ದೆಷ್ಟೋ ಬೆಳೆಯಲಾಗವೆ ಇಲ್ಲ
...............................................
...............................................
ತುದಿಯೆಲ್ಲಿ, ಗೊತ್ತಿಲ್ಲ? ಕ್ಷಿತಿದಾಚೆ!"[೩]

ನಾವು ಬಿತ್ತಿದ ಎಷ್ಟೋ ಬೆಳೆಯಾಗಲೇ ಇಲ್ಲ. ನಿಮ್ಮಲ್ಲಿ ಅದು ಬೆಳೆದು ಫಲವನ್ನು ನೀಡಲಿ. ನಾವು ಮಾಡಿದ ಬೆಳಕು ಸಾಲದೆ ಹೋದಾಗ ನೀವು ಇನ್ನಷ್ಟು ತುಸು ಬೆಳಕನ್ನು ಮಾಡಿಕೊಳ್ಳಬೇಕು. ಪ್ರೀತಿಯಲ್ಲಿ ಸುಟ್ಟು ಬೆಳಕಾಗಬೇಕು. ಸೂರ್ಯನ ಬೆಳಕನ್ನು ನೀಡುವ

ಕರ್ತವ್ಯವನ್ನು ತಿಳಿದಿರಬೇಕು. ಇಲ್ಲದಿದ್ದರೆ ಅವನ ಗೊಡವೆ ಬೇಡ. ಸೂರ್ಯ ಇರದಿದ್ದರೂ ಹಸಿರು ತಿಳಿದಿರಬೇಕು. ಬಿರಿದು ಹಣ್ಣಾಗುವ ಪವಾಡವನ್ನು ಕಾಲರಾಯನ. ಗೇಹ ಈ ದೇಹ ನಶ್ವರ ಇದೇ ಕೊನೆಯೆಂದು ತಿಳಿದಿರು, ಲೋಕ ಎಷ್ಟೋ ಇದರ ಆಚೆ ಇದೆ. ಕನಸು ಕ್ಷಿತಜದಾಚೆ. ಅದನ್ನು ತಲುಪುವತನಕ ತುದಿಯಲ್ಲಿ ಗೊತ್ತಿಲ್ಲ. ಕ್ಷಿತಜದಾಚೆ ಅದನ್ನು ತಲುಪುವ ಪ್ರಯತ್ನ ಮಾಡುತ್ತಲೇ ಇರಬೇಕೆಂದು ತಂದೆ ಮಗಳಿಗೆ ಹೇಳುವ ನಿಟ್ಟಿನಲ್ಲಿ ಕವನವನ್ನು ವ್ಯಕ್ತಪಡಿಸಿದ್ದಾರೆ.

ಚಂದ್ರಶೇಖರ ಕಂಬಾರರ ನಾಡು–ಕಾಡು ಪರಸ್ಪರ ದ್ವಂದ್ವ, ವಿರುದ್ಧ, ಸಂಕೀರ್ಣ ಸಂಬಂಧಗಳನ್ನು ವ್ಯಕ್ತಪಡಿಸಿದ್ದಾರೆ.

“ಈ ನಾಡು ಆ ಕಾಡು ಈ ಎರಡರ ನಡುವೆ

..............................................

..............................................

ಲಕ್ಷ ಜೀವರಾಶಿಗಳ ವಾರಾಶಿ ರಾಶಿ ರಾಶಿ !”[೪]

‘ನಾಡು –ಕಾಡು’ ಈ ಕವನದಲ್ಲಿ ನಿಸರ್ಗ ಮತ್ತು ನಾಗರಿಕತೆಗಳ ಸಂಬಂಧ ಕುರಿತು ಕಲಾತ್ಮಕವಾಗಿ ವಿವರಿಸಿದ್ದಾರೆ. ಈ ನಾಡು ಆ ಕಾಡು ಈ ಎರಡರ ನಡುವೆ ಜೇಡರ ಬಲೆ ಹೆಣೆದಂತೆ ದಾರಿಗಳು ಹರಿದಾಡಿವೆ ನಡೆವ, ತುಳಿವ, ಸಂಚಿನ, ಒಳಸಂಚಿನ ದಾರಿ, ಗುರಿ ತಪ್ಪಿಸುವ ದಾರಿ ಒಟ್ಟಾರೆ ನಿಮಗಿಷ್ಟು ತಿಳಿದಿರಲಿ ಇದು ಬದುಕುವ ದಾರಿ. ಉದಾಹರಣೆಗೆ ನೋಡಿ ಕಾಡಿನ ಮಧ್ಯೆ ಹಾವಿನ ರೂಪದಲ್ಲಿ ಹರಿದ ನದಿ ಅದರ ಬದಿದೊಡ್ಡ ಮರ ಅದರಡಿಯ ಮನೆಯಲ್ಲಿ ಮಾನವರು, ಅವರ ದನಕರುಗಳು ಇಲ್ಲಿ ಗೋಮುಖ ಅಲ್ಲಿ ವ್ಯಾಘ್ರ ನಖ ಬೇಟೆಯ ರಂಗೇರಿದ ಮೃಗ ನರನಾಟಕ. ಇರಿವಕೊಂಬು ಹರಿತವಾದ ಕೋರೆ ಹಲ್ಲು ಪರಸ್ಪರ ಕಬಳಿಸುವ ಹೊಂಚು ಹಾಕುವ ಎಂಭತ್ನಾಲ್ಕು ಜೀವ ರಾಶಿಗಳ ಊರಾಗು ರಾಶಿ ರಾಶಿಯಾಗಿವೆ.

“ಒಬ್ಬೊಬ್ಬರು ಘಾಟಿ,

..............................................

..............................................

ಬಣ್ಣದ ಮೀನು ಹಿಡಿಯೋದಿದೆ.”[೫]

ಒಬ್ಬೊಬ್ಬರೂ ಘಾಟಿ ಇನ್ನೊಬ್ಬರನ್ನು ಮೈಮರೆಸಿ ಮುಗಿಸಿ ತಾ ಮೀಸೆ ತೀಡುತ್ತ ಜೀವಿಸುವ ಧಾಟಿ ಎಲ್ಲರಿಗೂ, ಆದರೂ ನೆನಪಿರಲಿ ಇವರಾರು ಎಲ್ಲವನ್ನು ಕೊಲ್ಲುವುದಿಲ್ಲ. ಕೊಲ್ಲುವಷ್ಟೇ ಕೊಂದು ತಿನ್ನುವಷ್ಟೇ ತಿಂದು ಆದಷ್ಟು ಮಿತಿಯನ್ನು ಅನುಸರಿಸಿ ಉಳಿಸುವಷ್ಟೇನ್ನು ಉಳಿಸಿ ಬದುಕುವ ನಿಯತ್ತಿನ ರೀತಿ ಬದುಕಿನ ನೀತಿ. ಇಲ್ಲಿ ಇನ್ನೇನೇನು ಇಲ್ಲವೆನ್ನಬೇಡಿ ದೃಶ್ಯಯ ಬದಲಾದರೆ ಹಸಿರು ಹಗಲುಗಳಲ್ಲಿ ಹೊಂಬಣ್ಣದ ಸಂಜೆ ಮುಂಜಾವಿನ ಅಡ್ಡದಾರಿಗಳಲ್ಲಿ ಅಲೆದಾಡುವ ಖುಷಿಗಳಿವೆ. ಬೆರಗಿನಲ್ಲಿ ತೆರೆದರೆ ಮನ ಮರಗಳೂ ಪರಿಪರಿಯಾಗಿ ಅರಳಿ ಹಕ್ಕಿಗಳ ಕಂಠದಲ್ಲಿ ಸರಿಗಮದ ಸಂಭ್ರಮ ಉಕ್ಕಿಸುವದು. ನದಿಯ ದಂಡೆಯನ್ನು ತಬ್ಬಿ ತೆರೆ ನೊರೆಯ ಮುತ್ತು, ರತ್ನಗಳು ಸರಳವಾಗಿ ರಾಶಿಯಾಗಿ ಚೆಲ್ಲುವಲ್ಲಿ ನರನು ಬಾಲಕನಾಗಿ ಹುಳು ಅಚಿಟಿಸಿದ ಗಾಳ ಹಾಕಿ ಬಣ್ಣದ ಮೀನನ್ನು ಹಿಡಿಯುವನು.

“ಇದೆಲ್ಲಿ ಎಲ್ಲಿಯತನ? ಕತ್ತಲಾದರೆ ಆಯ್ತು

..............................................

..............................................

ಎಲ್ಲರನ್ನು ಎಳೆತಂದು ಬಿಗಿಯುತ್ತದೆ.”[೬].

ಇವೆಲ್ಲ ಎಲ್ಲಿಯತನಕ? ಕತ್ತಲಾದರೆ ಆಯಿತು ಹರಿದಾರಿಗಳ ಗೀರಿಲ್ಲ ಕಾಡುಗನಾಡುಗಳು ಬೇರೆ ಬೇರೆಯಲ್ಲಿ ಒಂದೊಂದು ಅಲ್ಲೆಲ್ಲೆ ಇದ್ದಲ್ಲಿ ಬಿದ್ದು ಕಟ್ಟಿಸಿದ ಕೊಂಬು, ಕೋರೆ ಹಲ್ಲಿನ ಸೆಟ್ಟು ತೆಗೆದಿಟ್ಟು ಕಲರಿನ ಮುಖವಾಡಗಳನ್ನು ಕಳಚಿ ಇಟು ಬೆರಳು ಸೀಪುತ್ತ ಕರಿಮಸಿಯಲ್ಲಿ ಕರಗುತ್ತವೆ. ಆಕಾಶ ನೀಲಿಯ ಚಿಕ್ಕೆ ಕಣ್ಣಿಗೆ ಈಗ ಎಷ್ಟು ಬಣ್ಣ ಕಂಡೀತು? ನದಿಯ ಎದೆಯಲ್ಲಿ ಮೂಡಿರುವ ಅದರ ನಡುಗುವ ಬಿಂಬವಷ್ಟೇ ಮಾತ್ರ. ಆಟ ಕಳೆಗುಟ್ಟುವುದು ಚಂದ್ರನು ತಿಂಗಳ ಮಾಯೆಯಲ್ಲದ್ದಿ ತೆಗೆದಾಗ ಚರಾಚರದೀ ಜಗತ್ತು ಭಗ್ಗನೆ ಕನಸಿನಲ್ಲಿ ಎಚ್ಚರಗೊಳ್ಳುತ್ತದೆ. ಬೆಚ್ಚನೆಯ ಕನಸು ಒಂದೆ ಹೊಕ್ಕಳ ಬಳ್ಳಿಗೆ ಎಲ್ಲರನ್ನು ಸಮೀಪಕೆ ಕರೆದು ಬಿಗುತ್ತದೆ.

“ಈಗ ನೋಡಿ ಮಜ

..............................................

..............................................

ಹಡಿವ ಕನಸು!”[೭]

ಈಗ ನೋಡಿ ಮಜ ನಾಡಿಗೆ ಕಾಡಿನ ಕನಸು, ಕಾಡಿಗೆ ಮರದ ಕನಸು, ಮರಕ್ಕೆ ಹಕ್ಕಿಯ ಕನಸು, ಹಕ್ಕಿಗೆ ಮೋಡದ ಗೊಂಚಲಿಗೆ ಬಿಟ್ಟ ಅರಳುಮಲ್ಲಿಗೆ ಚಿಕ್ಕೆಗೆ ನೀಲಿ ಕೈಲಾಸದಲ್ಲಿ ಲೀಲಾಜಾಲವಾಗಿ ತೇಲುವ ಚಂದ್ರನ ಕನಸು ಚಂದ್ರನಿಗೆ ನದಿಯಾಳದಲ್ಲಿ ಬೆಳ್ಳಿ ಮೀಣಾಗಿ ಈಜುವ ಕನಸು, ನದಿಯ ದಂಡೆಯ ಮೇಲೆ ಕುಳಿತ ನರಬಾಲಕನನ್ನು ಕಂಡಿರಾ? ಈತನಿಗೆ ಹುಳುಗಳು ಅಂಟಿಸಿ ಗಾಳ ಹಾಕಿ ಈಜಾಡುವ

ಬೆಳ್ಳಿ ಮೀನುಗಳನ್ನು ಹಿಡಿಯುವ ಕನಸು. ನಾಡು–ಕಾಡು ಎನ್ನದೆ ಎರಡಕ್ಕೂ ಸಮಾನವಾಗಿವೆ. ಕಾಡಿನ ಕಗ್ಗತ್ತದೆ, ನಾಡು ಕಾಡಾದ ವ್ಯಂಗ್ಯವನ್ನು ಈ ಕವನದಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಚಂದ್ರಶೇಖರ ಕಂಬಾರ 'ಶಿವಾಪುರ', ಹಳ್ಳಿಗಳ ಪ್ರತಿನಿಧಿಯಾಗಿದೆ. ಹಳ್ಳಿ ಸ್ಥಿತಿ–ಗತಿಗಳನ್ನು ಈ ಕವನ ಚೆನ್ನಾಗಿ ಪ್ರತಿಬಿಂಬಿಸಿದೆ.

"ಸಣ್ಣ ಹಳ್ಳಿ ಅದು ಶಿವಾಪುರ
ನೀವು ಕೇಳೇ ಇಲ್ಲ
..............................................
..............................................
ಪರಿಘ ಅವರ ಸುತ್ತು."[೮]

ಚಂದ್ರಶೇಖರ ಕಂಬಾರರು ಇಂದಿನ ಹಳ್ಳಿಯನ್ನು ವರ್ಣಿಸಲು ಶಿವಾಪುರವನ್ನು ತೆಗೆದುಕೊಂಡಿದ್ದಾರೆ. ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಹಳ್ಳಿಯ ಅಸ್ತಿತ್ವವನ್ನು ನಗಣ್ಯವಾಗಿಸಿದರೆ ದ್ಯೋತಕವಾಗಿದೆ. ಯಾವ ಸೌಲಭ್ಯಗಳಿಲ್ಲದ ಹಳ್ಳಿ ಹಾಳು ಆಗುತ್ತಿರುವುದು. ಮೂಢ ನಂಬಿಕೆ, ಬಡತನಗಳಿದ್ದರೂ ಹಳ್ಳಿಯ ಬದುಕು ಹೇಗೋ ರಾಕ್ಷಸರ, ಭೂತ, ದೇವರನ್ನು ನಂಬಿ ಬಾಳು ನಡೆಸಿದ್ದಾರೆ. ಸಣ್ಣ ಹಳ್ಳಿ ಶಿವಾಪುರದ ಬಗ್ಗೆ ನೀವು ಕೇಳೆ ಇಲ್ಲ. ನಿಮ್ಮ ನಕಾಶೆಯ ಯಾವ ಮೂಲೆಯಲ್ಲಿಯೂ ನಮ್ಮ ಊರು ಇಲ್ಲ. ಸಣ್ಣ ಬೀದಿಗಳು ಊರು ಬಿಟ್ಟು ಬೇರೆಲ್ಲಿಗೂ ಹೋಗುವುದಿಲ್ಲ. ಕಾಲು ದಾರಿಯಿಂದಲೇ ವಾರೊಳಗೆ ಬರಬೇಕು. ಬೇರೆ ದಾರಿಯೇ ಇಲ್ಲ. ಊರೊಳಗೆ ಬಂದರೂ ನಾವಿರುವ ಕೇಂದ್ರ ಬಿಂದು ಸಿಗದು. ಎಲ್ಲಿ ನಿಂತರೂ ಅದೇ ಕೇಂದ್ರ ತಿರುಗುವುದು. ಪರೀಘ ಅದರ ಸುತ್ತು. ಆದರೆ ಕೇಂದ್ರ ಬಿಂದು ಸಿಗದು ಎನ್ನುವುದು ಹೇಳಲಾಗಿದೆ.

"ಇಲ್ಲಿ ಘಟನೆ ಘಟಿಸಿವುದೇ ಇಲ್ಲ
..............................................
..............................................
ಚಿಂತೆಯಿಲ್ಲ ನಮಗೆ"[೯]

ಇಲ್ಲಿ ಘಟನೆಗಳು ಘಟಿಸುವುದಿಲ್ಲವಾದ್ದರಿಂದ ಇತಿಹಾಸಕ್ಕೆ ಕೆಲಸವೇ ಇಲ್ಲ. ಆದರೂ ಇಲ್ಲಿ ಕಥೆಗಳು ದಿನಾಲು ಹುಟ್ಟುತ್ತವೆ. ಹಳ್ಳಿಗರಿಗೆ ದೇವರುಗಳುಂಟು. ಆನರ ಕೊರೆತಯನ್ನು ಭರ್ತಿಮಾಡುವುದು. ಯಾವುದೇ ಪ್ರಗತಿ ಕಾಣದೆ ಹಳ್ಳಿಗಳು ಇದ್ದಲ್ಲೆ ಇದ್ದರೂ ಕ್ಷಿತಜಾಚೆಗೂ ನಂಟು ಬೆಳೆಸುವವರನ್ನು ಕಾಣಿಕೆಯಾಗಿ ನೀಡಿದೆ ನಮಗೆ ಚಿಂತೆಯಿಲ್ಲ ಎನ್ನುವರು. ಈ ಕವನದ ಮೂಲಕ ಶಿವಾಪುರ ಉದ್ಧಾರವಾಗುವದೆಂಬ ಆಶಾ ಭಾವ ಕವಿಯದಾಗಿದೆ.

**ಅಡಿ ಟಿಪ್ಪಣಿ**


೧ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೩
೨ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೪
೩ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೪–೩೩
೪ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೬
೫ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೬–೩೭
೬ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೬ – ೩೮
೭ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೭–೩೮
೮ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೩೮ – ೩೯
೯ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ. ಪು – ೪೦–೪೧




**ಶಿವಗಂಗಾ U. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**